ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE: 4/6/2020

# ಗಣಿಗಾರಿಕೆಗೆ ಲೈಸೆನ್ಸ್ ಕಡ್ಡಾಯ

ಬೆಂಗಳೂರು: ಪಟ್ಟಾ ಭೂಮಿಯಲ್ಲಿ ಗಣಿಗಾರಿಕೆ ನಡೆಸಲು ಲೈಸೆನ್ಸ್ ಕಡ್ಡಾಯಗೊಳಿಸಿ 2016ರಲ್ಲಿ 'ಕರ್ನಾಟಕ ಹಗುರ ಖನಿಜ ವಿನಾಯಿತಿ ನಿಯಮ'ಕ್ಕೆ ಸರ್ಕಾರ ತಂದಿದ್ದ ತಿದ್ದುಪಡಿಯನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಕರ್ನಾಟಕ ಹಗುರ ಖನಿಜ ವಿನಾಯಿತಿ (ತಿದ್ದುಪಡಿ) ನಿಯಮ-2016 ಅನ್ನು ಅಸಂವಿಧಾನಿಕ ಎಂದು ಘೋಷಿಸುವಂತೆ ಕೋರಿ ಚಾಮರಾಜನಗರದ ಖಾಲಿದ್ ಪಾಷಾ ಸೇರಿ ನೂರಾರುಮಂದಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಸಿಜೆ ಎ.ಎಸ್. ಓಕ್ ಹಾಗೂ ನ್ಯಾ. ಹೇಮಂತ್ ಚಂದನಗೌಡರ್ ಅವರಿದ್ದ ಪೀಠ ಇತ್ತೀಚೆಗೆ ಪ್ರಕಟಿಸಿದೆ.

ಸರ್ಕಾರ ಮಾಡಿದ್ದ ಕರ್ನಾಟಕ ಹಗುರ ಖನಿಜ ವಿನಾಯಿತಿ (ತಿದ್ದುಪಡಿ) ನಿಯಮ-2016ರ ನಿಯಮ 32 ಸಾಂವಿಧಾನಿಕವಾಗಿದೆ ಎಂದಿರುವ ಹೈಕೋರ್ಟ್, ತಿದ್ದುಪಡಿ ನಿಯಮ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಇತ್ಯರ್ಥಪಡಿಸಿದೆ.

**» ಸರ್ಕಾರದ ತಿದ್ದುಪಡಿ ನಿಯಮ ಎತ್ತಿ ಹಿಡಿದ ಹೈಕೋರ್ಟ್**

**ಅರ್ಜಿದಾರರ ಆಕ್ಷೇಪವೇನು?:** ತಿದ್ದುಪಡಿ ನಿಯಮ 32ರ ಅನುಸಾರ ರಾಜ್ಯದಲ್ಲಿ ಪಟ್ಟಾ ಭೂಮಿ ಹೊಂದಿರುವ ವ್ಯಕ್ತಿ ತನ್ನ ಭೂಮಿಯೊಳಗಿರುವ ಖನಿಜಗಳನ್ನು ಹೊರತೆಗೆಯಲು ಗಣಿಗಾರಿಕೆ ನಡೆಸಬೇಕೆಂದರೆ ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕಿತ್ತು. ಇದನ್ನು ಆಕ್ಷೇಪಿಸಿ 2016ರಲ್ಲಿ ಹೈಕೋರ್ಟ್ ಮೊರೆ ಹೋಗಿದ್ದ ಅರ್ಜಿದಾರರು, ಭೂಮಿಯ ಒಡೆತನ ಹೊಂದಿರುವ ವ್ಯಕ್ತಿಗಳಿಗೆ ಆ ಭೂಮಿಯಲ್ಲಿನ ಖನಿಜಗಳ ಮೇಲೂ ಹಕ್ಕಿದೆ. ಅದಕ್ಕಾಗಿ ಸರ್ಕಾರದಿಂದ ಲೈಸೆನ್ಸ್ ಪಡೆಯುವ ಅಗತ್ಯವಿಲ್ಲ ಎಂದು ವಾದಿಸಿದ್ದರು.